ಇಂದು ದಿನಾಂಕ 16-06-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿಯರ ಪರವಾಗಿಃ ಶ್ರೀ ಎಸ್.ಯು.ಎ. ವಕೀಲರಿಂದಃ**

ಈ ದಾವಾ ದಾಖಲು ಮಾಡಲು ಪಂಚಾಯತಿಯಲ್ಲಾದ ಠರಾವನ್ನು ದಿನಾಂಕ 24-03-2026 ರಿಂದ ಈ ವರೆಗೆ ಹಾಜರುಪಡಿಸಿಲ್ಲ ಎಂದರೆ ಸರಿ. ಠರಾವು 2023 ರಲ್ಲಿ ಆಗಿದೆ, ದಿನಾಂಕ ನೆನಪಿಲ್ಲ. ಠರಾವಿನ ಬಗ್ಗೆ ನಮ್ಮ ಕಂಪ್ಯೂಟರಿನಲ್ಲಿ ದಾಖಲಾಗಿರುತ್ತದೆ ಎಂದರೆ ಸರಿ . ಈತನಕ ಟೆಂಡರ್ ಆಗಿರುವ ಬಗ್ಗೆ ಇರುವ ಆಡಿಟ್ ರಿಪೋರ್ಟನ್ನು ಈವರೆಗೂ ಹಾಜರುಪಡಿಸಿಲ್ಲ ಎಂದರೆ ಸರಿ. ಆಡಿಟ್ ರಿಪೋರ್ಟ ಮಾಡಬೇಕಾದರೆ ಟೆಂಡರ್ ಫಾರ್ಮ ಕೊಟ್ಟ ಆಧಾರದ ಮೇಲೆ ಆಡಿಟ್ ರಿಪೋರ್ಟ ಆಗುತ್ತದೆ ಎಂದರೆ ಸರಿಯಲ್ಲ, ಟೆಂಡರ್ ಅಮೌಂಟ್ ಎಷ್ಟು ನಿಗದಿಯಾಗಿದೆ ಆ ಆಧಾರದ ಮೇಲೆ ಆಡಿಟ್‌ನಲ್ಲಿ ಉಲ್ಲೇಖ ಮಾಡುತ್ತಾರೆ. ಯಾವ ಹಣಕ್ಕೆ ಟೆಂಡರ್ ಸ್ವೀಕೃತಿಯಾಗಿದೆ ಆಡಿಟ್ ಆ ಹಣಕ್ಕಿಂತ

ಹೆಚ್ಚು ಬರುತ್ತಿದೆಯೋ ಅಥವಾ ಕಡಿಮೆ ಬರುತ್ತಿದೆಯೋ ಅದನ್ನು ಪರಿಶೀಲನೆ ಮಾಡಿ ಹೇಳಬೇಕು . ಈ ಪ್ರಕರಣದಲ್ಲಿ ಆಡಿಟ್ ಹಣ ಎಷ್ಟು ತೋರಿಸಿದ್ದಾರೆ ದಾಖಲಾತಿ ನೋಡಿ ಹೇಳಬೇಕು. ನಿ.ಪಿ.27 ವಾಹನ ಪಾರ್ಕಿಂಗ್ ಕರಾರು ಟೆಂಡರ್ ಸ್ವೀಕೃತಿಯಾದ ನಂತರದಲ್ಲಿ ಆಗುವಂತಹದ್ದು ಎಂದರೆ ಸರಿ . ಟೆಂಡರ್ ಫಾರ್ಮನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ಟೆಂಡರ್ ಫಾರ್ಮನಲ್ಲಿ ರೂ. 1,000-00 ನಿಗದಿ ಮಾಡಿರುತ್ತೇವೆ. ಟೆಂಡರ್ ಕರೆದ ನಂತರದಲ್ಲಿ ಟೆಂಡರ್ ಪ್ರಕ್ರಿಯೆ ನಮ್ಮಅಂದಾಜು ಪತ್ರಿಕೆಗೆ ಅನುಗುಣವಾಗಿರುತ್ತದೆ ಎಂದರೆ ಸರಿಯಲ್ಲ , ಸಾಕ್ಷಿ ಟೆಂಡರ್ ಕಮ್ ಹರಾರು ಪ್ರಕ್ರಿಯೆ ಎಂದು ನುಡಿದಿರುತ್ತಾರೆ. ಟೆಂಡರನ ನಿಯಮಾವಳಿ ಹಾಗೂ ಹರಾಜಿನ ನಿಯಮಾವಳಿ ವಾಸ್ತವ್ಯದಲ್ಲಿ ಬೇರೆ ಬೇರೆ ಎಂದರೆ ಸರಿ, ಸಾಕ್ಷಿ ಟೆಂಡರ್ ಕಮ್ ಹರಾಜು ಪ್ರಕ್ರಿಯೆ ಒಂದೇ ವೇಳೆಗೆ ಅನ್ವಯ ಮಾಡಬಹುದು ಹಾಗೂ ಪ್ರಕಟಣೆ ಮಾಡಬಹುದು . ಟೆಂಡರ್ ಕರೆದಾಗ ಟೆಂಡರ್ ಫಾರ್ಮ ಹಾಕುವುದು ಗೌಪ್ಯವಾಗಿರುತ್ತದೆ ಎಂದರೆ ಸರಿ . ನಮ್ಮ ದಾಖಲಾತಿಗಳ ಪ್ರಕಾರ 9 ಜನರು ಟೆಂಡರ್ ಹಾಕಿದ್ದರು . ಟೆಂಡರ್ ಓಪನ್ ಆದಾಗ ನಮ್ಮ ನಿಗದಿತ ಬೆಲೆಗೆ ಯಾರು ಹತ್ತಿರವಾಗಿರುತ್ತಾರೆ ಅವರಿಗೆ ಟೆಂಡರ್ ಓಪನ್ ಮಾಡಲು ಕೊಡುತ್ತೇವೆ ಎಂದರೆ ಸರಿಯಲ್ಲ . ಆ ಸಮಯದಲ್ಲಿ ನಾವು ಅಂದಾಜು ಪತ್ರಿಕೆಯಲ್ಲಿ ನಿಗದಿಪಡಿಸಿದ ಸ್ಟೆಂಡರ್ಡ ಎಷ್ಟಾಗಿತ್ತು ನೆನಪಿಲ್ಲ . ನಿ.ಪಿ.24 - ಟೆಂಡರ್ ಫಾರ್ಮ ಇರುತ್ತದೆ . ಗ್ರಾಮ ಪಂಚಾಯತದವರು ನಿಗದಿಪಡಿಸಿದಅಂದಾಜು ಹಣ ರೂ . 4,90,000-00, ಪ್ರತಿವಾದಿ ಟೆಂಡರ್ ಹಾಕಿರುವುದು ರೂ. 5,00,000-00 ಎಂದರೆ ಸರಿ. ಟೆಂಡರನ್ನು ಹಾಕುವಂತಹ ಫಾರ್ಮ ಸರಿ ಇದೆ, ಆದರೆ ನಾವು ಒಪ್ಪಿಕೊಳ್ಳುವುದಿಲ್ಲ. ಈ ಟೆಂಡರ್ ಫಾರ್ಮ ನಾವೇ ರೂ . 1,000-00 ಕ್ಕೆ ಮಾರಾಟ ಮಾಡಿದ ಟೆಂಡರ್ ಫಾರ್ಮ ಎಂದರೆ ಸರಿ . ಈ ಟೆಂಡರಿಗೆ ಸಂಬಂಧಪಟ್ಟಂತೆ ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಏನು ಬರೆದಿದೆ ಓದಿಕೊಂಡು, ತಿಳಿದುಕೊಂಡು, ಅರ್ಥ ಮಾಡಿಕೊಂಡು ಸಹಿ

ಹಾಕಿದ್ದೇನೆ ಎಂದರೆ ಸರಿ . ದಾವಾದಲ್ಲಿರುವ ಅಂಶಗಳಿಗೆ ಹಾಗೂ ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿರುವ ಅಂಶಗಳಿಗೆ ನನ್ನ ಯಾವುದೇ ತಕರಾರು ಇರುವುದಿಲ್ಲ.

16. ನಮ್ಮ ಪಂಚಾಯತ ಠರಾವಿನಲ್ಲಿ ಈಗ ಇರುವ ವಕೀಲರನ್ನು ನೇಮಿಸಿಕೊಳ್ಳುವ ವಿಷಯದಲ್ಲಿ ಠರಕವು ಆಗಿಲ್ಲ ಎಂದರೆ ಸರಿಯಲ್ಲ. ಯಾವ ದಿನಾಂಕದಂದು ಠರಾವಾಗಿದೆ ಪರಿಶೀಲನೆ ಮಾಡಬೇಕು. ನಾನು ಇರಬೇಕಾದರೆ ಠರಾವು ಆಗಿದೆ. ಪಂಚಾಯತ ಠರಾವಿನಲ್ಲಿ ಶ್ರೀ ಎಂ.ಎನ್. ಶಾನಭಾಗ ಇವರನ್ನು ಪಂಚಾಯತ್ ವಕೀಲರನ್ನಾಗಿ ನೇಮಿಸಿಕೊಳ್ಳಬೇಕೆಂದು ಠರಾವು ಆಗಿದೆ ಎಂದರೆ ಮಾಹಿತಿ ಇಲ್ಲ . ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ನಾನು ದಾವಾದಲ್ಲಿ ಹೇಳಿದ ಹಣ ಟೆಂಡರಿಗೆ ಸಂಬಂಧಪಟ್ಟಂತೆ ಆದ ಕರಾರಿಗೆ ಸಂಬಂಧಪಟ್ಟಿದೆಯೋ ಅಥವಾ ಆಡಿಟ್ ರಿಪೋರ್ಟಗೆ ಸಂಬಂಧಪಟ್ಟಿದೆಯೋ ಎಂದರೆ ಸಾಕ್ಷಿ ಕರಾರಿಗೆ ಸಂಬಂಧಪಟ್ಟಿದೆ ಎಂದು ನುಡಿದಿರುತ್ತಾರೆ. ಟೆಂಡರ್ ಫಾರ್ಮಿಗೆ ಒಳಪಟ್ಟು ಕರಾರಾಗಿದೆ ಎಂದರೆ ಸರಿಯಲ್ಲ. ನಿ.ಪಿ.4 ರಲ್ಲಿ ಟೆಂಡರ್ ಆದ ಕುರಿತು ಗೌಪ್ಯವಾಗಿ ಆದಂತಹ ಟೆಂಡರ್ ಅಥವಾ ಓಪನ್ ಆಗಿ ಆಗಿರುತ್ತದೆಯೋ ಎಂದರೆ ಸಾಕ್ಷಿ ಟೆಂಡರ್ ಕಮ್ ಹರಾಜು ಎಂದು ಪರಿಗಣಿಸಲಾಗಿದೆ ಎಂದು ನುಡಿದಿರುತ್ತಾರೆ. ಆವತ್ತು ಪ್ರತಿವಾದಿ ತಮ್ಮ ಹೈಯಸ್ಟ ಬಿಡ್ಡನ್ನು ಟೆಂಡರ್ ಫಾರ್ಮನಲ್ಲಿ ರೂ.5,00,000-00 ಹಾಕಿದ್ದರು, ಹರಾಜಿನಲ್ಲೂ ಇವರದೇ ಆಗಿದೆ , ಆದರೆ ಹೆಚ್ಚಿನ ಅಮೌಂಟಿಗೆ ಆಗಿದೆ. ಈ ವಿಷಯವನ್ನು ನಮ್ಮ ದಾವಾದಲ್ಲಿ ಹಾಗೂ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಬರೆದಿಲ್ಲ ಎಂದರೆ ನೆನಪಿಲ್ಲ. ನಮ್ಮ ಪ್ರಕಾರ ಅದು ಟೆಂಡರ್ ಕಮ್ ಹರಾಜು ಯಾವುದು ಹೆಚ್ಚಿನ ಮೊತ್ತ ಬರುತ್ತದೆಯೋ ಅದನ್ನು ಕನ್ಸಿಡರ್ ಮಾಡುತ್ತೇವೆ. ನಮ್ಮ ದಾವಾದಲ್ಲಿ ಪ್ರತಿವಾದಿ ಹೈಯಸ್ಟ ಬಿಡ್ಡನ್ನು ಯಾವ ತಾರೀಖಿನಂದು ಎಷ್ಟಕ್ಕೆ ಮಾಡಿರುತ್ತಾನೆ ಬರೆದಿಲ್ಲ ಎಂದರೆ ಸರಿ . ನಾನು ಹೇಳುವಂತೆ ಹೈಯಸ್ಟ ಬಿಡ್ಡನ್ನು ಪ್ರತಿವಾದಿ ಪಡೆದುಕೊಂಡಿದ್ದಾರೆ ಎಂದು ನೋಟಿಸ್‌ನಲ್ಲಾದರೂ ಬರೆದಿದ್ದಿರಾ ಎಂದರೆ ಸಾಕ್ಷಿ

ನೋಟಿಸಿನಲ್ಲಿ ಬರೆದಿಲ್ಲ, ಒಡಂಬಡಿಗೆ ಬಾಂಡನಲ್ಲಿ ಬರೆದಿದ್ದೇವೆ ಎಂದು ನುಡಿದಿರುತ್ತಾರೆ . ನಿ.ಪಿ.3 ನಾನು ಹೇಳುವಂತಹ ಒಡಂಬಡಿಕೆ ಬಾಂಡ್ ಎಂದರೆ ಸರಿ . ನಿ.ಪಿ.3 ರಲ್ಲಿ ಕಂಡೀಷನ್ ನಂ. 1 ನಲ್ಲಿ ಟೆಂಡರ್ ಅವಧಿಯನ್ನು ನಮೂದು ಮಾಡಿದ್ದಾರೆ. ಕಂಡೀಷನ್ ನಂ.21 ರ ಪ್ರಕಾರ ಪ್ರತಿ 11 ತಿಂಗಳಿಗೆ ಅದನ್ನು ನವೀಕರಣ ಮಾಡಿಕೊಳ್ಳಿ ಎಂದು ಪ್ರತಿವಾದಿಗೆ ನೋಟಿಸ್ ಕೊಟ್ಟು ತಿಳಿಸಿದ್ದಿರಾ ಎಂದರೆ ಸಾಕ್ಷಿ ನೋಟಿಸ್ ಕೊಟ್ಟು ತಿಳಿಸಿಲ್ಲ, ಅದು ಅವರ ಜವಾಬ್ದಾರಿ ಎಂದು ನುಡಿದಿರುತ್ತಾರೆ. ನಿಯಮ ಉಲ್ಲಂಘನೆ ಮಾಡಿದ್ದಾರೆ ಎಂದು ಹೇಳಲು ನಾವು ಹಾಜರುಪಡಿಸಿದ ದಾಖಲಾತಿ ಹೊರತುಪಡಿಸಿ ಬೇರೆ ದಾಖಲಾತಿ ಇಲ್ಲ. ನಿ.ಪಿ.12 - ಪಂಚನಾಮೆ ಯಾರ ಕೈಬರಹದಲ್ಲಿದೆ ಎಂದು ಈ ದಿನ ತಿಳಿದುಕೊಂಡು ಬಂದಿಲ್ಲ . ಇಂತಿಂತಹ ವಾಹನಗಳಿಗೆ ಇಂತಿಷ್ಟು ಹಣಕ್ಕಿಂತ ಪ್ರತಿವಾದಿ ಅದಕ್ಕಿಂತ ಹೆಚ್ಚಿಗೆ ಹಣ ಪಡೆದುಕೊಂಡಿದ್ದಾರೆ ಎಂದು ರಸೀದಿ ಇಟ್ಟು ಪಂಚನಾಮೆ ಮಾಡಿದ್ದಿರಾ ಎಂದರೆ ಸಾಕ್ಷಿ ಪರಿಶೀಲನೆ ಮಾಡಬೇಕು ಎಂದು ನುಡಿದಿರುತ್ತಾರೆ. ನಿ.ಪಿ.12 ರಲ್ಲಿ ಇರುವಂತಹ ಅಷ್ಟೂ ಜನರು ನಮ್ಮ ಸಿಬ್ಬಂದಿ ವರ್ಗದವರೇ ಬೇರೆಯವರು ಇರುವುದಿಲ್ಲ ಎಂದರೆ ಸರಿಯಲ್ಲ. ಶರತ್ ನಾಯ್ಕ ನಮ್ಮ ಸಿಬ್ಬಂದಿ ಅಲ್ಲ. 4 ಮತ್ತು 5 ರವರೂ ಕೂಡ ನಮ್ಮ ಸಿಬ್ಬಂದಿಗಳು ಅಲ್ಲ. ಕೊನೆಯವರು - ವಿನಾಯಕ ಗೌಡ ನಮ್ಮ ಸಿಬ್ಬಂದಿ ಅಲ್ಲ. ನಿ.ಪಿ.12 ರಲ್ಲಿ ತೋರಿಸಿದ 4, 5 ಹಾಗೂ ಕೊನೆಯ ವ್ಯಕ್ತಿಗಳೂ ಕೂಡ ಪಂಚಾಯತಿಗೆ ಸಂಬಂಧಪಟ್ಟವರಲ್ಲ ಎಂದರೆ ಸಾಕ್ಷಿ ಪಂಚಾಯತಿ ಸಿಬ್ಬಂದಿ ಅಲ್ಲ , ಆದರೆ ಕೊನೆಯವರು ಪಂಚಾಯತಿಯಲ್ಲಿ ನಿಯಮಿತವಾಗಿ ಕೆಲಸ ಮಾಡುವವರು ಎಂದು ನುಡಿದಿರುತ್ತಾರೆ. 4 ಹಾಗೂ 5 ನೇ ವ್ಯಕ್ತಿಗಳೂ ಕೂಡ ನಮ್ಮ ಪಂಚಾಯತಿಗೆ ಸಂಬಂಧಪಟ್ಟವರೇ ಆದರೂ ಕೂಡ ಪಂಚಾಯತಿಗೆ ಸಂಬಂಧಪಟ್ಟಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಾರ್ಕಿಂಗ್ ವ್ಯವಹಾರ ಕರಾರು ಪತ್ರ ನಿ.ಪಿ.3 ರಲ್ಲಿರುವ 3 ನೇ ಷರತ್ತಿನಂತೆ ಅವರು 5,00,000-00 ರೂಪಾಯಿಯ 1/6 ಅಂಶ ಮಾತ್ರ ತುಂಬಬೇಕು, ನಾವು ಹೇಳಿದಷ್ಟು ಅಲ್ಲ ಎಂದರೆ ಸರಿಯಲ್ಲ. ಷರತ್ತು ನಂ.3 ರಲ್ಲಿ ಮೊದಲನೇ ಪಾರ್ಟಿ

ಟೆಂಡರದಾರರ ಅವಧಿ 01-04-2021 ರಿಂದ 31-03-2023 ರ ತನಕ ಪ್ರತಿ ತಿಂಗಳ ಮೊದಲ ಕೆಲಸದ ದಿವಸ ಟೆಂಡರ್ ಹಣದ ಪೈಕಿ 1/6 ಅಂಶದಂತೆ ಹಣವನ್ನು ತಪ್ಪದೇ ಪಾರ್ಟಿ ನಂ .2 ರವರಿಗೆ ಪಾವತಿಸತಕ್ಕದ್ದು ಎಂದು ಇದೆ ಎಂದರೆ ಸರಿಯಲ್ಲ . ನಿ.ಪಿ. 3 ನ್ನು ತಿದ್ದುಪಡಿ ಮಾಡಿಕೊಡಿ ಎಂದು ಮೇಲಾಧಿಕಾರಿಗೆ ಅರ್ಜಿಯನ್ನು ಕೊಟ್ಟಿಲ್ಲ . ಟೆಂಡರ್ ಪ್ರಕ್ರಿಯೆಯನ್ನು ಓದಿ ತಿಳಿದುಕೊಂಡು ಸಹಿ ಹಾಕಿದ್ದೇವೆ ಎಂದರೆ ಸಾಕ್ಷಿ ನನಗಿಂತ ಮೊದಲಿನ ಪಿ .ಡಿ.ಓ. ಹಾಗೂ ಅಧ್ಯಕ್ಷರು ಸಹಿ ಹಾಕಿದ್ದಾರೆ ಎಂದು ನುಡಿದಿರುತ್ತಾರೆ. 5,00,000-00 ರೂಪಾಯಿಯ 1/6 ಅಂಶ ಅಷ್ಟು ಹಣವನ್ನು ಪ್ರತಿವಾದಿ ಕೊಟ್ಟಿದ್ದಾರೆ ಈಗ ಯಾವುದೂ ಬಾಕಿ ಇಲ್ಲ ಎಂದರೆ ಸರಿಯಲ್ಲ. ಭದ್ರತಾ ಠೇವಣಿ ರೂ. 1,22,500-00 ನಾವು ಪ್ರತಿವಾದಿಗೆ ವಾಪಸ್ಸು ಕೊಡಲು ಬಾಧ್ಯಸ್ಥರು ಎಂದರೆ ಸರಿಯಲ್ಲ , ಆ ಹಣವನ್ನು ಬಾಕಿ ತುಂಬುವುದಕ್ಕೂ ವಜಾ ಮಾಡಿಕೊಂಡಿದ್ದೇವೆ . ನಾವು ಭ್ರಷ್ಟಾಚಾರಕ್ಕೆ ಒಳಗಾಗಿ ಸದರಿ ಹಣವನ್ನು ಮುಟ್ಟುಗೋಲು ಹಾಕಿಕೊಂಡಿದ್ದೇವೆ ಎಂದರೆ ಸರಿಯಲ್ಲ . ಕರಾರು ಪ್ರಕಾರ ನಾವು ನಡೆದುಕೊಳ್ಳದೇ ಪ್ರತಿವಾದಿಯ ವಿರುದ್ಧ ಸುಳ್ಳು ಕೇಸು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ . ಟೆಂಡರ್ ಪ್ರಕಾರ ಪ್ರತಿವಾದಿ ಹಣವನ್ನು ತುಂಬುತ್ತಿದ್ದರೂ ಕೂಡ ಹಾಗೂ ರೂ . 1,22,500-00 ತುಂಬಿದ್ದರೂ ಕೂಡ ನಮ್ಮ ಪಂಚಾಯತದವರು ಪ್ರತಿವಾದಿಯ ಟೆಂಡರನ್ನು ತಪ್ಪಿಸಲು ಭ್ರಷ್ಟಾಚಾರಕ್ಕೆ ಒಳಗಾಗಿ ಷರತ್ತು ಉಲ್ಲಂಘಿಸಿದ್ದಾರೆ ಎಂದು ಸುಳ್ಳು ದಾಖಲಾತಿ ಸೃಷ್ಠಿ ಮಾಡಿದ್ದೇವೆ ಎಂದರೆ ಸರಿಯಲ್ಲ . ಪಾರ್ಕಿಂಗನಲ್ಲಿ ಹೆಚ್ಚಿನ ಹಣವನ್ನು ವಸೂಲು ಮಾಡಿದ್ದಾರೆ ಎಂದು ಯಾವುದೇ ವಾಹನ ಮಾಲಿಕರು ತಮ್ಮ ವಾಹನ ಸಂಖ್ಯೆಯನ್ನು ಹಾಕಿ ದೂರನ್ನು ಕೊಟ್ಟಿ ದ್ದಾರಾ ಎಂದರೆ ದೂರನ್ನು ಕೊಟ್ಟಿಲ್ಲ , ಮಾಧ್ಯಮದಲ್ಲಿ ಪ್ರಕಟಣೆಯಾಗಿದೆ. ಯಾವ ಮಾಧ್ಯಮದಿಂದ ಬಂದಿದೆ ಆ ಮಾಧ್ಯಮದಿಂದ ನಾವು ಲಿಖಿತವಾದ ದಾಖಲಾತಿಯನ್ನು ಪಡೆದುಕೊಂಡಿಲ್ಲ, ಪೂರಕವಾಗಿ ಪಂಚನಾಮೆ ಮಾಡಿದ್ದೇವೆ.

ಪಾರ್ಟ ನಂ.1 ಹಾಗೂ ಪಾರ್ಟ ನಂ.2 ನಲ್ಲಿ ಪ್ರತಿವಾದಿ ಹಾಗೂ ಪಂಚಾಯತಿ ಮಾತ್ರ ಇರುವುದು ಎಂದರೆ ಸರಿ. ಸಾಕ್ಷಿ ಪಂಚಾಯತಿ ಎಂದರೆ ಅಧ್ಯಕ್ಷರು ಮತ್ತು ಪಂಚಾಯತಿ ಅಧಿಕಾರಿಗಳು ಎಂದು ನುಡಿದಿರುತ್ತಾರೆ. ಈ ರೀತಿ ಎರಡೂ ಜನಗಳ ಮಧ್ಯೆ ವಿವಾದವಿದ್ದರೆ ಅದನ್ನು ನಮ್ಮಲ್ಲೇ ಒಂದೇ ಪಾರ್ಟ ತೀರ್ಮಾನ ಮಾಡುವ ಹಾಗಿಲ್ಲ ಎಂದರೆ ಸರಿಯಲ್ಲ . ಷರತ್ತು ಉಲ್ಲಂಘನೆಯಾಗಿದ್ದರಿಂದ ಟೆಂಡರನ್ನು ರದ್ದು ಪಡಿಸಬೇಕೆಂದು ಸಹಾಯಕ ಆಯುಕ್ತರಿಗೆ ಮನವಿ ಪತ್ರ ಕೊಟ್ಟಿಲ್ಲ , ಅದು ಅವರ ಕಾರ್ಯವ್ಯಾಪ್ತಿಗೆ ಬರುವುದಿಲ್ಲ. ನಮ್ಮ ಪರವಾಗಿ ನಾವೇ ಷರತ್ತು ಉಲ್ಲಂಘನೆಯಾಗಿದೆ ಎಂದು ನಿರ್ಧಾರ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ . ಷರತ್ತು ಉಲ್ಲಂಘನೆಯಾಗಿರುವ ಬಗ್ಗೆ ಮಾಡಿದ ಪಂಚನಾಮೆಯ ಯಥಾ ಪ್ರತಿಯನ್ನು ಪ್ರತಿವಾದಿಗೆ ಕಳುಹಿಸಲಾಗಿದೆ ಎಂದುಬರವಣಿಗೆ ಮಾಡಿಲ್ಲ , ನೋಟಿಸ್‌ನಲ್ಲಿಕಳುಹಿಸಲಾಗಿದೆ. ಪಂಚನಾಮೆ ಮಾಡುವ ಪೂರ್ವದಲ್ಲಿ ಇಂತಹ ತಾರೀಖಿಗೆ ಪಂಚನಾಮೆಮಾಡುತ್ತೇವೆ ಎಂದು ಪ್ರತಿವಾದಿಗೆ ಲಿಖಿತ ನೋಟಿಸ್‌ನ್ನು ನೀಡಿರುವುದಿಲ್ಲ,ಸಾಕ್ಷಿ ಪಂಚನಾಮೆ ಮಾಡುವ ಪೂರ್ವದಲ್ಲಿ ನೋಟಿಸನ್ನು ನೀಡುವುದಿಲ್ಲ ಎಂದು ನುಡಿದಿರುತ್ತಾರೆ . ನಮ್ಮ ಪಂಚಾಯತಿ ಅಧಿಕಾರವನ್ನು ದುರುಪಯೋಗ ಮಾಡಿಕೊಂಡು ಪ್ರತಿವಾದಿಯ ವಿರುದ್ಧ ಸುಳ್ಳು ದಾವೆಯನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಸುಳ್ಳು ದಾವೆಯಿಂದ ಪ್ರತಿವಾದಿಗೆ ಆಗಿರುವ ತೊಂದರೆಗೆ ನಾವೇ ಪರಿಹಾರವನ್ನು ಕೊಡಬೇಕು ಎಂದರೆ ಸರಿಯಲ್ಲ . ಪ್ರತಿವಾದಿ ಮಾಡಿರುವ ಪ್ರತಿ ಮಾಗಣಿಯನ್ನು ಪಡೆಯಲು ಪ್ರತಿವಾದಿ ಅರ್ಹನಿದ್ದಾನೆ ಎಂದರೆ ಸರಿಯಲ್ಲ . ಸುಳ್ಳು ದಾಖಲಾತಿಗಳನ್ನು ಸೃಷ್ಠಿಸಿ ಸುಳ್ಳು ಸಾಕ್ಷಿನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾದಂ.
ಕುಮಟಾ